ಹಾಗೂ ಸದರಿ ನಾಲೆಯ 18 ಮತ್ತು 19ನೇ ಕಿ.ಮೀ.ಗಳಲ್ಲಿ ಭೂಸ್ವಾಧೀನದಲ್ಲಿ ಉಂಟಾದ ವಿಳಂಬದಿಂದ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ.

ಇ) ಮುತ್ತುರಾಯನ ಕೆರೆ ಪೋಷಕ ನಾಲೆಯ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗಮದಿಂದ 2005–06ರಿಂದ ಈವರೆಗೆ ಒಟ್ಟಾರೆ ರೂ.576.511 ಲಕ್ಷ ಅನುದಾನವನ್ನು ನಿಗದಿಗೊಳಿಸಿ, ಅದರಂತೆ ವೆಚ್ಚ ಮಾಡಲಾಗಿರುತ್ತದೆ.

ಈ) ಈಗಾಗಲೇ ಮುತ್ತರಾಯನ ಕೆರೆ ಪೋಷಕ ನಾಲೆಯ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ಉ) ಉದ್ಭವಿಸುವುದಿಲ್ಲ.

ಶ್ರೀಮತಿ ಕಲ್ಪನಾ ಸಿದ್ದರಾಜು : ಮಾನ್ಯ ಅಧ್ಯಕ್ಷರೆ, ನವಿಲೆಯಿಂದ ಕೆಸ್ತೂರುವರೆವಿಗೂ ಕೆಲಸ ಸಂಪೂರ್ಣವಾಗಿ ಮುಗಿದಿಲ್ಲ. ಬಹಳ ಕಡೆ ಸಿಲ್ಟ್ ತುಂಬಿದೆ. ಕೆಲವು ಕಡೆ ಮಳೆ ಬಂದು ಮಣ್ಣು ಸಂಪೂರ್ಣವಾಗಿ ಮುಚ್ಚಿಕೊಂಡಿದೆ. ಈ ಬಗ್ಗೆ ಅನೇಕ ಸಲ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ : ಸನ್ಮಾನ್ಯ ಅಧ್ಯಕ್ಷರೆ, ಅವರು ಇಲ್ಲಿ ಕೇಳಿರುವಂಥ ಪ್ರಶ್ನೆ ಏನೆಂದರೆ, ಮುತ್ತುರಾಯನಕೆರೆ ಫೀಡರ್ ಕೆನಾಲ್ ವರ್ಕ್ ಡಿಲೇಯಾಗಿದೆ ಎಂದು ಹೇಳಿದರು. ಅದು ಸಣ್ಣ ನೀರಾವರಿ ಇಲಾಖೆಯಿಂದ ಪಡೆದ ಮೇಲೆ ಈಗಾಗಲೇ ಅದನ್ನು ಪೂರ್ಣಗೊಳಿಸಿದ್ದೇವೆ. ಇದರ ಜೊತೆಗೆ ಎರಡು ಕಲ್ವರ್ಟ್ ಮಾಡಬೇಕಾಗಿದ್ದು ಆ ಕೆಲಸವನ್ನೂ ಮಾಡಿದ್ದೇವೆ. ಇತರೆ ಎಲ್ಲಾ ಕೆಲಸಗಳೂ ಆಗಿವೆ. ಮುತ್ತುರಾಯನ ಕೆರೆಯಿಂದ ಕೆಳಗಡೆ ಸುಮಾರು ಹನ್ನೇರಡು ಟ್ಯಾಂಕ್‌ಗಳು ತುಂಬಬೇಕಾಗಿರುತ್ತದೆ. ಮುತ್ತುರಾಯನ ಕೆರೆ ಸ್ಪಿಲ್ ಓವರ್ ಆದರೆ ಮಾತ್ರ ಆ ಟ್ಯಾಂಕ್‌ಗಳು ತುಂಬುತ್ತವೆ. ಆದರೆ, ಇದುವರೆವಿಗೂ ಆ ಮುತ್ತುರಾಯನ ಕೆರೆ ಕೇವಲ 50% ಮಾತ್ರ ಫಿಲ್‌ಅಪ್ ಆಗುತ್ತಿರುವುದರಿಂದ ಕೆಳಗಡೆ ಬರುತ್ತಿಲ್ಲ. ಅಂಥ ಸಂದರ್ಭದಲ್ಲಿ ಅಲ್ಲಿ ಏನಾದರೂ ಊಳು ತುಂಬಿದ್ದರೆ ನಮ್ಮ ಮೆಂಟೆನೆನ್ಸ್ ಗ್ರಾಂಟ್‌ನಿಂದ ತೆಗೆಸಿ ಕ್ಲೀಯರ್ ಮಾಡಿಸಿ ಕೊಡಿಸುತ್ತೇವೆ.